ಕಾರ್ಯಕ್ರಮವನ್ನು ಬೆರೆಸುವುದು ಚಳುವಳಿಯ ಹಾದಿಯಿಂದ ಕವಲಾದಂತೆ ಎಂದುಕೊಂಡಿದ್ದ ಲೋಹಿಯಾಗೆ, 'ಭಾರತದ ಸ್ವಾತಂತ್ರ್ಯ ಇಂಥ ಸಣ್ಣಪುಟ್ಟ ಕಾರ್ಯಕ್ರಮಗಳಿಂದ ಕೈಗೆಟುಕುವಂತಹದಲ್ಲ; ಇವುಗಳಿಂದ ಭಾರತೀಯರಲ್ಲಿ ಕೊಂಚ ಶಕ್ತಿ ತುಂಬಬಹುದಾದರೂ ಬ್ರಿಟಿಷ್ ಸಾಮ್ರಾಜ್ಯದೊಡನೆ ಸೆಣಸಾಡುವ ಸಾಮರ್ಥ್ಯ ಅವುಗಳಿಗಿಲ್ಲ' ಎನ್ನಿಸಿತ್ತು. ಆದ್ದರಿಂದ, 'ಭಾರತದಿಂದ ಬ್ರಿಟಿಷರನ್ನು ಹೊಡೆದೋಡಿಸುವುದೆಂದರೆ ಹಿಮಾಲಯದಷ್ಟು ದೊಡ್ಡ ಕಾರ್ಯ; ಅಕ್ಕಿ ಕುಟ್ಟುವ, ಹಿಟ್ಟು ಬೀಸುವ ಕಾರ್ಯಕ್ರಮಗಳಿಂದ ಈ ದೊಡ್ಡ ಗುರಿಯ ಸಾಧನೆಯಾಗಲಾರದು' ಎಂದು ಬರೆದಿದ್ದರು. ಜೊತೆಗೆ,'ದೊಡ್ಡ ದೊಡ್ಡ ಶಬ್ದಗಳ ಪ್ರಯೋಗವನ್ನೂ ಮಾಡಿದ್ದೆ' ಎಂಬುದನ್ನೂ ನೆನಪಿಸಿಕೊಂಡರು.

ಲೋಹಿಯಾ ಆ ಮುದ್ರಿತ ಲೇಖನದ ಪ್ರತಿಯನ್ನು ಗಾಂಧೀಜಿಯವರಿಗೆ ಕಳಿಸಿ ಅಭಿಪ್ರಾಯ ಕೇಳಿದಾಗ ಗಾಂಧೀಜಿ ಬೇಸರದಿಂದಲೇ ಬರೆದರು: 'ನೀವು ನನ್ನ ಅಭಿಪ್ರಾಯ ಕೇಳುವ ಅಗತ್ಯವಿರಲಿಲ್ಲ. ಏಕೆಂದರೆ, ನಿಮ್ಮಲ್ಲಿ ವಿರೋಧಿಗಳ ದೃಷ್ಟಿಕೋನವನ್ನು ಸಹಿಸಿಕೊಳ್ಳುವ ತಾಳ್ಮೆಯೇ ಇಲ್ಲ.'

ಗಾಂಧೀಜಿಯ ಪತ್ರದ ಪರಿಣಾಮ ಕುರಿತು ಲೋಹಿಯಾ ಬರೆಯುತ್ತಾರೆ: 'ಇದರಿಂದ ನಾನು ಕೋಪಿಸಿಕೊಂಡೆ ಎನ್ನಲಾಗದಿದ್ದರೂ ಸಿಡಿಮಿಡಿಗೊಂಡದ್ದು ನಿಜ. ನಾನು ಮತ್ತೆ ಅವರಿಗೆ ಬರೆದೆ: 'ಪ್ರಾಯಶಃ ನಾನು ಶಬ್ದಗಳ ಸರಿಯಾದ ಪ್ರಯೋಗ ಮಾಡಿಲ್ಲದಿರಬಹುದು, ಆದರೆ ನೀವು ನನ್ನ ಆಶಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕಿತ್ತು. ನನ್ನ ಆಶಯವನ್ನು ತಿಳಿದುಕೊಂಡು ನೀವು ಉತ್ತರ ಕೊಡಬಹುದಿತ್ತು.' ಅವರಿಂದ ಕೂಡಲೇ ಮಾರೋಲೆ ಬಂತು. ಮೊದಲಿನದು ಎಷ್ಟು ಖಾರವಾಗಿತ್ತೋ, ಅಷ್ಟೇ ಪ್ರೀತಿಯಿಂದ ಕೂಡಿತ್ತು ಹಾಗೂ ಮಧುರವಾಗಿತ್ತು ಅವರ ಆ ಎರಡನೆಯ ಪತ್ರದ ಒಕ್ಕಣೆ.'

ಇದಾದ ನಂತರ ಲೋಹಿಯಾ 'ಕಾಂಗ್ರೆಸ್ ಸೋಷಲಿಸ್ಟ್' ಪತ್ರಿಕೆಗೆ ಲೇಖನ ಬರೆದುಕೊಡಬೇಕೆಂದು ಕೇಳಲು ಗಾಂಧೀಜಿಯ ಬಳಿ ಹೋದರು.

'ನೀವೀಗ ನನ್ನ ಪತ್ರಿಕೆಯಲ್ಲಿ ಲೇಖನ ಬರೆಯುವ ಬಗ್ಗೆ ಯೋಚನೆ ಮಾಡುವಿರಾ?', ಲೋಹಿಯಾ ಕೇಳಿದರು.

'ನೋಡಿ, ನಾನು 'ಹರಿಜನ' ಪತ್ರಿಕೆಗೆ ನಿಮ್ಮದೊಂದು ಲೇಖನವನ್ನು ಆಯ್ದುಕೊಂಡಿದ್ದೇನೆ' ಎಂದ ಗಾಂಧೀಜಿ ತಮ್ಮದೇ ಆದ ರೀತಿಯಲ್ಲಿ ಜೋರಾಗಿ ನಕ್ಕು ಹೇಳಿದರು: 'ರಾವಣನಿಂದಲೂ ಏನಾದರೂ ಕೊಂಚ ಕಲಿಯುವುದು ಸಾಧ್ಯ.'

'ರಾಮ'ಮನೋಹರನಾದ ತನ್ನನ್ನು 'ರಾವಣ' ಎಂದ ಗಾಂಧೀಜಿಯ ಮಾತು ನೆನೆದು ನಗುತ್ತಾ ಮುಂದೊಮ್ಮೆ ಲೋಹಿಯಾ ಹೇಳಿದರು: 'ತಾವು ರಾಮನೆಂದೂ, ನಾನು– ರಾಮಮನೋಹರ– ರಾವಣನೆಂದೂ ಗಾಂಧೀಜಿಯವರ ಮಾತಿನ ಸ್ಪಷ್ಟ ಆಶಯವಾಗಿತ್ತು. ಅವರ ಮಾತಿನಿಂದ ನನಗೇನೂ ಪೆಚ್ಚೆನಿಸಲಿಲ್ಲ. ಏಕೆಂದರೆ, ರಾವಣನೂ ಸಹ ಸಾಕಷ್ಟು ದೊಡ್ಡ ವಿದ್ವಾಂಸನೇ ಆಗಿದ್ದ!'

ಮುಂದೆ ಲೋಹಿಯಾ ತಮ್ಮ 'ರಾಮ ಕೃಷ್ಣ ಶಿವ' ಎಂಬ ಪ್ರಖ್ಯಾತ ಲೇಖನದಲ್ಲಿ ರಾವಣನ ವಿದ್ವಾಂಸ ಗುಣವನ್ನು ನೆನಪಿಸಿಕೊಳ್ಳುತ್ತಾರೆ:

'ರಾವಣನ ಕೊನೆಗಾಲದ ಕತೆಯೊಂದಿದೆ. ರಾವಣ ನಿಸ್ಸಂದೇಹವಾಗಿ ಆ ಕಾಲದ ಸರ್ವಶ್ರೇಷ್ಠ ವಿದ್ವಾಂಸರಲ್ಲೊಬ್ಬ. ಆದರೆ ಅವನು ವಿದ್ಯೆಯನ್ನು ದುರುಳ ಮಾರ್ಗದಲ್ಲಿ ಬಳಸಿದ್ದ. ಆದರೂ ಈ ವಿದ್ಯೆ ದುಷ್ಟ ಉದ್ದೇಶಗಳಿಂದ ಬಿಡುಗಡೆಗೊಂಡು ಮಾನವ ಕುಲಕ್ಕಾಗಿ ಸಂಗ್ರಹಗೊಂಡು ಉಳಿಯಬೇಕಾಗಿತ್ತು. ಆದ್ದರಿಂದ 'ರಾವಣನಿಂದ ಕೊನೆಯ ಪಾಠಗಳನ್ನು ಕಲಿತುಕೊಂಡು ಬಾ' ಎಂದು ರಾಮ ಲಕ್ಷ್ಮಣನನ್ನು ಕಳಿಸಿದ. ಲಕ್ಷ್ಮಣ ಹೋದ; ರಾವಣ ಮೌನವಾಗಿದ್ದ. ಮರಳಿ ಬಂದ ಲಕ್ಷ್ಮಣ, ತಾನು ರಾವಣನಿಂದ ಏನನ್ನೂ ಕಲಿಯಲಾಗಲಿಲ್ಲ; ಇದಕ್ಕೆ ರಾವಣನ ಅಹಂಕಾರ ಕಾರಣ ಎಂದು ಅಣ್ಣನಿಗೆ ಹೇಳಿದ. ಅಲ್ಲಿ ಏನು ನಡೆಯಿತೆಂಬುದರ ಪ್ರತಿ ವಿವರಗಳನ್ನೂ ರಾಮ ತಮ್ಮನನ್ನು ಕೇಳಿ ತಿಳಿದುಕೊಂಡ. ಲಕ್ಷ್ಮಣ ಹೋಗಿ ರಾವಣನ ತಲೆದೆಸೆಯಲ್ಲಿ ನಿಂತಿದ್ದನೆಂದು ತಿಳಿಯಿತು. 'ರಾವಣನ ಕಾಲ ಬುಡದಲ್ಲಿ ಹೋಗಿ ನಿಂತುಕೋ' ಎಂದು ಲಕ್ಷ್ಮಣನನ್ನು ರಾಮ ವಾಪಸ್ ಕಳಿಸಿದ. ಆಗ ರಾವಣ ರಾಜನೀತಿಯ ಶಿಕ್ಷಣ ನೀಡಿದ.'

ಈ ಕತೆಯನ್ನು ಚರ್ಚಿಸುತ್ತಾ ಲೋಹಿಯಾ ಬರೆಯುತ್ತಾರೆ: 'ಉತ್ತಮ ನಡವಳಿಕೆ ಕುರಿತ ಕತೆಗಳಲ್ಲಿ ಇದು ಅದ್ವಿತೀಯವಾದುದು; ಇಲ್ಲಿವರೆಗಿನ ಕತೆಗಳಲ್ಲೆಲ್ಲ ಶ್ರೇಷ್ಠವಾದುದು. ವ್ಯಕ್ತಿಯೊಬ್ಬ ಹೇಗೆ ತಿನ್ನುತ್ತಾನೆ; ಅವನು ನಡೆಯುವ, ಕೂರುವ, ಕಾಣಿಸಿಕೊಳ್ಳುವ, ಬಟ್ಟೆ ಉಡುವ ರೀತಿ ಹೇಗಿರುತ್ತದೆ; ಅವನು ತನ್ನ ಜನರೊಡನೆ ಹೇಗೆ ಮಾತಾಡುತ್ತಾನೆ, ಹೇಗೆ ಒಡನಾಡುತ್ತಾನೆ; ಇತರರ ಹಿತವನ್ನು ಪರಿಗಣಿಸುತ್ತಾನೋ ಇಲ್ಲವೋ; ಪ್ರತಿ ಪ್ರಾಣಿಯ ಜೊತೆ ಹೇಗೆ ನಡೆದುಕೊಳ್ಳುತ್ತಾನೆ... ಇವೆಲ್ಲವೂ ಸದಾಚಾರಕ್ಕೆ ಸಂಬಂಧಿಸಿದಂಥವೇ.'

ಪೂರ್ಣ ಪ್ರಮಾಣದ ವೃತ್ತಿ ರಾಜಕಾರಣದಲ್ಲಿದ್ದು ಇಷ್ಟೊಂದು ಸೂಕ್ಷ್ಮವಾಗಿ ಯೋಚಿಸಿ ಬರೆದ ರಾಜಕಾರಣಿಗಳು ಜಗತ್ತಿನಲ್ಲೇ ತೀರಾ ಕಡಿಮೆ.

ರಾಜಕೀಯ, ಪತ್ರಿಕೆ, ಚಳುವಳಿಗಳ ನಡುವೆ ಮುಳುಗಿದ್ದ ತರುಣ ಲೋಹಿಯಾ ಮದುವೆ ಮಾಡಿಕೊಳ್ಳಬೇಕು ಎಂದು ಒತ್ತಾಯಿಸುವವರೂ ಇದ್ದರು. ಶ್ರೀಮಂತ ಮಾರವಾಡಿಯೊಬ್ಬರು ಲೋಹಿಯಾರನ್ನು ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದು ಆಗೀಗ ಸೂಚನೆ ಕೊಡತೊಡಗಿದರು. ಅವರಿಂದ ಲೋಹಿಯಾ ತಪ್ಪಿಸಿಕೊಂಡರು. ಈ ನಡುವೆ ಬೇರೆ ಕುಟುಂಬಗಳಿಂದಲೂ ಮದುವೆಯ ಒತ್ತಾಯ ಬರುತ್ತಿತ್ತು. ಅಪ್ಪನೂ, ಮಗನೂ ನಗುನಗುತ್ತಾ ಅವರನ್ನು ಸಾಗಹಾಕುತ್ತಿದ್ದರು.

ಒಂದು ದಿನ ಒಬ್ಬ ಹೆಣ್ಣುಮಗಳ ತಂದೆ ಲೋಹಿಯಾ ಇದ್ದ ಮನೆಗೇ ಬಂದುಬಿಟ್ಟರು. ಈ ಇರಿಸುಮುರಿಸಿನಿಂದ ತಪ್ಪಿಸಿಕೊಳ್ಳುವುದು ಹೇಗೆಂದು ಯೋಚಿಸುತ್ತಿದ್ದ ಲೋಹಿಯಾಗೆ ಒಂದು ತರಲೆ ಉಪಾಯ ಹೊಳೆಯಿತು. ಲೋಹಿಯಾ ಇದ್ದಕ್ಕಿದ್ದಂತೆ ತಮ್ಮ ಕನ್ನಡಕವನ್ನು ಕೆಳಗೆ ಬೀಳಿಸಿಕೊಂಡರು. ನಂತರ ಕೆಳಗೆ ಬಿದ್ದ ಕನ್ನಡಕ ಎಲ್ಲಿದೆ, ಕಾಣಿಸುತ್ತಿಲ್ಲ ಎಂಬಂತೆ ನೆಲದ ಮೇಲೆ ತಡಕಾಡಿ ಕನ್ನಡಕ ಎತ್ತಿಕೊಳ್ಳುತ್ತಾ ಆ ಹೆಣ್ಣುಮಗಳ ತಂದೆಗೆ ಹೇಳಿದರು: 'ನೋಡಿದ್ರಲ್ಲ ಸ್ವಾಮಿ! ನನಗೆ ಕಣ್ಣೇ ಸರಿಯಾಗಿ ಕಾಣ್ತಾ ಇಲ್ಲ! ನನ್ನಂಥವನಿಗೆ ನಿಮ್ಮ ಮಗಳನ್ನ ಮದುವೆ ಮಾಡಿಕೊಟ್ಟರೆ ಅವಳ ಗತಿ ಏನಾಗಬೇಕು?'

ಹೀರಾಲಾಲ್ ಮಗನ ಚಾಲಾಕಿತನವನ್ನು ಮೆಚ್ಚಿದರು. ಮಗ ಮದುವೆ, ಸಂಸಾರಗಳ ಸಿಕ್ಕುಗಳಲ್ಲಿ ಸಿಕ್ಕಿಕೊಳ್ಳುವುದು ಅಪ್ಪನಿಗೂ ಇಷ್ಟವಿರಲಿಲ್ಲ.

ಇಸವಿ 1936. ನೆಹರು ಕಾಂಗ್ರೆಸ್ ಅಧ್ಯಕ್ಷರಾದರು. ಅಷ್ಟು ಹೊತ್ತಿಗೆ ಲೋಹಿಯಾರ ಶಕ್ತಿ, ಪ್ರತಿಭೆಗಳು ನೆಹರುಗೆ ಮನದಟ್ಟಾಗಿದ್ದವು. 'ಉದಯಿಸುತ್ತಿರುವ ನಕ್ಷತ್ರ' ಎಂದು ಲೋಹಿಯಾರನ್ನು ಬಣ್ಣಿಸಿದರು. ಕಾಂಗ್ರೆಸ್ ಪಕ್ಷದಲ್ಲಿ ವಿದೇಶಾಂಗ ನೀತಿಗಳ ವಿಭಾಗವೊಂದನ್ನು ಸ್ಥಾಪಿಸಬೇಕೆಂದು ಲೋಹಿಯಾ ಸಲಹೆ ಕೊಟ್ಟರು; ಆ ವಿಭಾಗದ ಕಾರ್ಯದರ್ಶಿ ನೀವೇ ಆಗಬೇಕು ಎಂದರು ನೆಹರು. ಮುಕ್ತ ಅಡ್ಡಾಟದ ಬದುಕನ್ನು ಇಷ್ಟಪಡುತ್ತಿದ್ದ ಲೋಹಿಯಾ ಕಚೇರಿಯ ಕುರ್ಚಿ, ಟೇಬಲ್‌ಗೆ ಅಂಟಿಕೊಳ್ಳುವ ಕೆಲಸಕ್ಕೆ ಸಿದ್ಧರಿರಲಿಲ್ಲ. ಆಚಾರ್ಯ ನರೇಂದ್ರದೇವರ ಒತ್ತಾಯದಿಂದಾಗಿ ಲೋಹಿಯಾ ಆ ಕೆಲಸವನ್ನು ಒಪ್ಪಿಕೊಳ್ಳಬೇಕಾಯಿತು. ಲೋಹಿಯಾ ಅಲಹಾಬಾದ್‌ಗೆ ಬಂದರು.

ಕಾಂಗ್ರೆಸ್ ವಿದೇಶಾಂಗ ನೀತಿ ವಿಭಾಗದ ಕೆಲಸ ವಹಿಸಿಕೊಂಡ ಲೋಹಿಯಾ, ಜಗತ್ತಿನಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದ ಸಂಘಟನೆಗಳನ್ನು ಬೆಸೆದರು. ಸ್ವಾತಂತ್ರ್ಯ ಚಳುವಳಿಗೆ ಲೋಕದ ಸಮಾನ ದುಃಖಿಗಳ ಜೊತೆ ವಿಶಾಲ ನಂಟು ಏರ್ಪಟ್ಟಿತು. 'ಕಾಂಗ್ರೆಸ್ಸಿನ ವಿದೇಶಾಂಗ ನೀತಿ ಇಂಡಿಯಾದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡಿರಬೇಕೇ ಹೊರತು, ಇಂಗ್ಲೆಂಡಿನ ಹಿತಾಸಕ್ತಿಯನ್ನಲ್ಲ' ಎಂದ ಲೋಹಿಯಾ, ಭಾರತ ಸ್ವತಂತ್ರ ರಾಷ್ಟ್ರದಂತೆ ಯೋಚಿಸಬೇಕೇ ಹೊರತು ಅಧೀನ ರಾಷ್ಟ್ರದಂತಲ್ಲ ಎಂದು ಒತ್ತಿ ಹೇಳಿದರು. ಇಂಗ್ಲೆಂಡ್, ಫ್ರಾನ್ಸ್, ಅಮೆರಿಕಗಳು ಬಳಸುತ್ತಿದ್ದ 'ಪ್ರಜಾಪ್ರಭುತ್ವ' ಎಂಬ ಮಾತು ಎಷ್ಟು ಟೊಳ್ಳೆಂಬುದನ್ನು ತೋರಿಸಿದರು. ರಷ್ಯಾದಲ್ಲಿ ಕಮ್ಯುನಿಸ್ಟ್ ಪಕ್ಷದೊಳಗಿದ್ದ ಎದುರಾಳಿಗಳನ್ನು ಹತ್ತಿಕ್ಕಿ ಸ್ಟಾಲಿನ್ ಅಧಿಕಾರಕ್ಕೆ ಬಂದ ರೀತಿಯನ್ನೂ ಲೋಹಿಯಾ ವಿಮರ್ಶಿಸಿದರು: 'ಈಗ ಒಂದು ಬಣದ ಸರ್ವಾಧಿಕಾರ ರಶ್ಯಾದಲ್ಲಿ ಅಸ್ತಿತ್ವಕ್ಕೆ ಬಂದಿದೆ. ರಷ್ಯಾ ಎಂದರೆ 'ಶಾಂತಿಯ ಹರಿಕಾರ', ಅಥವಾ 'ನವಸಂಸ್ಕೃತಿಯ ಪ್ರಯೋಗಾಲಯ' ಎಂಬ ಬಣ್ಣನೆಗಳು ಪ್ರಶ್ನಾರ್ಹವಾಗಿವೆ.'

ಎರಡನೆಯ ಮಹಾಯುದ್ಧ ಶುರುವಾಗತೊಡಗಿತ್ತು. ಯುದ್ಧದಲ್ಲಿ ಬ್ರಿಟನ್ನನ್ನು ಬೆಂಬಲಿಸಬೇಕೇ ಬೇಡವೇ ಎಂದು ಕಾಂಗ್ರೆಸ್ ತೂಗುಯ್ಯಾಲೆಯಲ್ಲಿತ್ತು. ಭಾರತ ಬ್ರಿಟನ್ನನ್ನೂ, ಹಿಟ್ಲರ್‌ನನ್ನೂ ವಿರೋಧಿಸಬೇಕೆಂದು ಲೋಹಿಯಾ ಸ್ಪಷ್ಟವಾಗಿ ಹೇಳಿದರು.

(ಸಶೇಷ)